International Journal of Kannada Research 2021; 7(4): 109-111

International Journal of Kannada Research
www.kannadajournal.com

**ISSN: 2454–5813**
IJKR 2021; 7(4): 109-111
© 2021 IJKR
www.kannadajournal.com
Received: 19-08-2021
Accepted: 21-09-2021

**ಡಾ ಎಚ್.ಎಂ. ಮಹೇಶ್**
ಕನ್ನಡ ಸಹ ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು

**Corresponding Author:**
**ಡಾ ಎಚ್.ಎಂ. ಮಹೇಶ್**
ಕನ್ನಡ ಸಹ ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು

# ಶರಣರ ವಚನಗಳಲ್ಲಿ 'ಸೂತಕ ಮತ್ತು ಮೌಢ್ಯ' ಗಳ ನಿರಾಕರಣೆ

**ಡಾ ಎಚ್.ಎಂ. ಮಹೇಶ್**

ಕನ್ನಡ ಭಾಷೆ, ಸಾಹಿತ್ಯ ಮತ್ತು ಬದುಕಿನಲ್ಲಿ ಕ್ರಾಂತಿಕಾರಕ ಬದಲಾವಣೆಗೆ ನಾಂದಿ ಹಾಡಿದ್ದು ಶರಣರ ವಚನಗಳು. ಹನ್ನೆರಡನೆಯ ಶತಮಾನದ ಬಸವಾದಿ ಶರಣರು ಕಾವ್ಯ ಕೃಷಿಗೆ ಹೊರಟವರಲ್ಲ. ಸಮಾಜ ಸುಧಾರಣೆ ಅವರ ಬಹುಮುಖ್ಯ ಉದ್ದೇಶವಾಗಿತ್ತು. ಆ ಗುರಿ ಸಾಧನೆಗೆ ವಚನಗಳನ್ನು ಮಾಧ್ಯಮವನ್ನಾಗಿ ಮಾಡಿಕೊಂಡರು. ಭಾರತದಂತಹ ಸಂಪ್ರದಾಯವಾದಿ ದೇಶದಲ್ಲಿ ರೂಢಿಗತವಾಗಿದ್ದ ನಂಬಿಕೆ, ಸಂಪ್ರದಾಯ, ಆಚಾರ, ವಿಚಾರ, ರೀತಿ, ನೀತಿ, ವೇದ, ಉಪನಿಷತ್ತು, ಪಂಚಾಂಗ, ಜ್ಯೋತಿಷ್ಯ ಎಲ್ಲವನ್ನು ಪುನರ್ವಿಮರ್ಶೆಗೆ ಒಳಪಡಿಸಿದರು. ಸತ್ಯಾಸತ್ಯತೆಯ ಶೋಧ ಕಾರ್ಯಕ್ಕೆ ಕೈ ಹಾಕಿದರು. ಪಟ್ಟಭದ್ರ ಹಿತಾಸಕ್ತಿಗಳ ವಿರೋಧದ ನಡುವೆಯೂ ಜನ ಜಾಗೃತಿಗೆ ಚಾಲನೆ ನೀಡಿದರು. ಶತಶತಮಾನಗಳಿಂದ ಮುಗ್ಧ ಜನರಲ್ಲಿ ಮೌಢ್ಯವನ್ನು ತುಂಬಿ ಅವರನ್ನು ಕತ್ತಲೆಯಲ್ಲಿಟ್ಟು ಸುಖಭೋಜನ ಉಂಡವರು ಶರಣರ ಕ್ರಾಂತಿಯಿಂದ ತಲ್ಲಣಕ್ಕೊಳಗಾದರು.

ಮಾನವಧರ್ಮ ಪ್ರತಿಪಾದಕರಾಗಿದ್ದ ಬಸವಾದಿ ಶರಣರು ಸಿದ್ಧಾಂತವನ್ನು ರೂಪಿಸಿದವರಲ್ಲ. ಬರೀ ಬೋಧಕರಲ್ಲ. ತಮ್ಮೊಳಗೆ ತಾವು ಬದಲಾಗಬೇಕು ಎಂದು ಹೇಳಿ ಮಾಡಿ ತೋರಿಸಿದವರು. ಬಸವಣ್ಣನನ್ನು ಕುರಿತು ಜಿ.ಎಸ್ ಶಿವರುದ್ರಪ್ಪನವರ ಕವಿತೆಯ ಸಾಲುಗಳು ಶರಣರ ವ್ಯಕ್ತಿತ್ವವನ್ನು ಕಣ್ಣಮುಂದೆ ನಿಲ್ಲಿಸುತ್ತವೆ.

> ಇರಬಹುದು ನಿನಗಿಂತ ದೊಡ್ಡವರು
> ಅನುಭಾವದಲ್ಲಿ ಮೇಲೇರಿ ಬಯಲಾದವರು
> ಇರಬಹುದು ನಿನಗಿಂತಲೂ ದೊಡ್ಡ ತ್ಯಾಗಿಗಳು, ವಿರಾಗಿಗಳು
> ಇರಲಾರರೆಂದೇ ತೋರುತ್ತಿದೆ ನಿನ್ನಂತೆ
> ನಿನ್ನೊಳಗಿನಂಕು ಡೊಂಕುಗಳನ್ನು ಕಂಡುಕೊಂಡವರು

ವ್ಯಕ್ತಿ ಬದಲಾದರೆ, ಸಮಾಜ ಬದಲಾಗುತ್ತದೆ ಎನ್ನುವುದು ಶರಣರ ಬಲವಾದ ನಂಬಿಕೆ. ಸಮಾಜದ ಕಳೆಯನ್ನು ಕಿತ್ತು ಬೆಳೆಯನ್ನು ತೆಗೆಯಲು ಹೊರಟ ಇವರ ವಚನಗಳ ಆಶಯ ವ್ಯಕ್ತಿಗತ ಬದಲಾವಣೆಯೇ ಆಗಿತ್ತು.

ಯಜಮಾನ ಸಂಸ್ಕೃತಿಯ ವಾರಸುದಾರರೆನಿಸಿಕೊಂಡವರು ಮುಗ್ಧ ಜನರನ್ನು ಅಜ್ಞಾನದಲ್ಲಿಯೇ ಇಟ್ಟು, ಅವರ ಶ್ರಮದ ಫಲವನ್ನು ಕಡೆಗಣಿಸಿ, ದಾರಿದ್ರ್ಯಕ್ಕೆ

ಪೂರ್ವಜನ್ಮದ ಕರ್ಮವೇ ಕಾರಣ ಎಂದು ಹೇಳುತ್ತಿದ್ದರು. ಪೂರ್ವ ಜನ್ಮದ ಪಾಪದ ಫಲವನ್ನು ಈ ಜನ್ಮದಲ್ಲಿ ಅನುಭವಿಸಬೇಕು. ಜೊತೆಗೆ ಮೇಲಿನವರ ಸೇವೆಯನ್ನು ಫಲಾಪೇಕ್ಷೆಯಿಲ್ಲದೆ ಮನಃಪೂರ್ವಕವಾಗಿ ಮಾಡಿದರೆ ಮುಂದಿನ ಜನ್ಮದಲ್ಲಿ ಒಳ್ಳೆಯದನ್ನು ಕಾಣುವಿರಿ ಎಂದು ದಿಕ್ಕು ತಪ್ಪಿಸುವ ಕೆಲಸಗಳು ನಿರಂತರವಾಗಿ ಸಾಗಿದ್ದವು. ಸನಾತನ ವೇದ, ಶಾಸ್ತ್ರ, ಪುರಾಣ, ಪಂಚಾಂಗ, ಜ್ಯೋತಿಷ್ಯಗಳು ಮುಗ್ಧ ಜನರನ್ನು ಬಂಧಿಸಿದ್ದವು. ನಂಬಿಕೆಗಳು ಬಲಗೊಂಡ ಹಾಗೆ ಮೌಢ್ಯಗಳೂ ಬಲಗೊಂಡವು.

ಶರಣರ ವಿರೋಧ ಇದ್ದುದ್ದು ನಂಬಿಕೆಯ ವಿರುದ್ಧವಲ್ಲ. ಅದು ಮೂಢ ನಂಬಿಕೆಯ ವಿರುದ್ಧ. ಸ್ವಂತ ಅನುಭವ ಮತ್ತು ವಸ್ತುನಿಷ್ಠ ಪುರಾವೆಯಿಲ್ಲದೆ ಅನ್ಯರ ಹೇಳಿಕೆ ಅಥವಾ ಪ್ರತಿಪಾದನೆಯನ್ನು ಆಧರಿಸಿ ಏಕಾಏಕಿ ಒಪ್ಪಿಕೊಳ್ಳುವುದು ಹಾಗೂ ಪಾಲಿಸುವುದು ಮೂಢನಂಬಿಕೆ. ಸ್ವರ್ಗ, ನರಕ, ಕೈಲಾಸಕ್ಕೆ ಸಂಬಂಧಿಸಿದ ನಂಬಿಕೆಗಳನ್ನು ಶಿವಶರಣರು ಹುಸಿಗೊಳಿಸಿದರು. ''ಭೂ ಲೋಕಕ್ಕೆ ಭಿನ್ನವಾದ ಕೈಲಾಸವಿದೆ. ಅಲ್ಲಿ ಶಿವ ಪಾರ್ವತಿಯಿದ್ದಾರೆ. ಸತ್ತ ನಂತರ ಮನುಷ್ಯರು ಕೈಲಾಸವಾಸಿಗಳಾಗುತ್ತಾರೆ'' ಎನ್ನುವ ನಂಬಿಕೆಯನ್ನು ಹುಸಿಗೊಳಿಸಿರುವ ಬಸವಾದಿ ಶರಣರು ಅಂಥ ನಂಬಿಕೆಗಳಿಗೆ ಆಧಾರವಿಲ್ಲ ಎಂದರು. ''ಕೈಲಾಸಕ್ಕೆ ಹೋಗುತ್ತೇನೆಂಬುದೇ ಒಂದು ಭ್ರಮೆ'' ಎಂದು ಆಯ್ದಕ್ಕಿ ಲಕ್ಕಮ್ಮ ಹೇಳಿದ್ದಾಳೆ.

ಮಾನವ ಧರ್ಮ ಪ್ರತಿಪಾದಕರಾಗಿದ್ದ ಬಸವಾದಿ ಶರಣರು ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೇಲ್ವರ್ಗದ ಪುರುಷ ಪ್ರಧಾನ ವ್ಯವಸ್ಥೆ ಹುಟ್ಟುಹಾಕಿದ ರೂಢಿಗತ ನಂಬಿಕೆ ಸಂಪ್ರದಾಯಗಳ ಪುನರ್ವಿಮರ್ಶೆಗೆ ತೊಡಗಿದರು. ನಿತ್ಯ ಬದುಕಿನಲ್ಲಿ ದೇವರು, ಧರ್ಮ, ಆಚರಣೆಗಳೊಂದಿಗೆ ಬೆಸೆದುಕೊಂಡಿರುವ 'ಸೂತಕ'ಗಳೂ ಸೇರಿದಂತೆ ಅನೇಕ ಮೌಢ್ಯಗಳನ್ನು ನಿರಾಕರಿಸಿ, ವೈಚಾರಿಕ, ವೈಜ್ಞಾನಿಕ ಅರಿವನ್ನು ಸಮಾಜದಲ್ಲಿ ಮೂಡಿಸಲು ಪ್ರಯತ್ನಿಸಿದರು. ಸಂಸ್ಕೃತಿಯ ಭಾಗವಾಗಿ ಬದುಕಿನಲ್ಲಿ ಆಳವಾಗಿ ಬೇರೂರಿರುವ 'ಸೂತಕ'ಗಳು ಬಹುತೇಕ ಎಲ್ಲ ಸಮುದಾಯಗಳನ್ನು ನಿಯಂತ್ರಿಸುವ ಮೂಲಕ ಸಂಸ್ಕಾರದ ರೂಪ ಪಡೆದಿವೆ. 'ಸೂತಕ' ಎಂದರೆ ಮೈಲಿಗೆ, ಹೊಲೆ ಎಂಬ ಅರ್ಥಗಳುಂಟು. ಸಮಾಜದಲ್ಲಿ ಆಳವಾಗಿ ಬೇರೂರಿರುವ ಪಂಚ ಸೂತಕಗಳು ವೈದಿಕ ಧರ್ಮದ ಕೊಡುಗೆ. ಜಾತಿ ಸೂತಕ, ಜನನ ಸೂತಕ, ರಜಸ್ಸೂತಕ, ಪ್ರೇತ ಸೂತಕ ಮತ್ತು ಎಂಜಲು ಸೂತಕಗಳು ಆವರಿಸಿದಾಗ, ಶಾಸ್ತ್ರೋಕ್ತವಾಗಿ ಪರಿಹಾರವನ್ನು ಕಂಡುಕೊಳ್ಳಬೇಕು ಎಂಬ ಭಾವನೆಯನ್ನು ಜನರ ಮನಸ್ಸಿನಲ್ಲಿ ಬಿತ್ತಲಾಗಿತ್ತು. ಜನಪದರಲ್ಲಿ ಸೂತಕಕ್ಕೆ ವಿಶೇಷವಾದ ಮಹತ್ವವಿದೆ. ಹಾಗೆಯೇ ಸೂತಕ ತೆಗೆಸಿಕೊಳ್ಳುವ ಕ್ರಮವೂ ವ್ಯವಸ್ಥಿತವಾಗಿ ನಡೆಯುತ್ತದೆ. ಸೂತಕ ಪರಿಹಾರದ ನಂತರವೇ ಶುಭ ಕಾರ್ಯಗಳು ಜರುಗುತ್ತವೆ. ಸಾಮಾನ್ಯವಾಗಿ ಸೂತಕಾಚರಣೆಯಲ್ಲಿ ಯಾವುದೇ ಶುಭಕಾರ್ಯಗಳನ್ನ, ಪೂಜೆ ಪುನಸ್ಕಾರಗಳನ್ನ ವೈದಿಕರು ಮಾಡುವುದಿಲ್ಲ. ಆದರೆ ಬಸವಾದಿ ಶರಣರು ಬೋಧಿಸಿದ ವಿಚಾರಗಳೇ ಬೇರೆ. 'ಗಂಗೆಗೆ ಕಟ್ಟಿಲ್ಲ ಲಿಂಗಕ್ಕೆ ಮುಟ್ಟಿಲ್ಲ' ಎನ್ನುವಂತೆ ಲಿಂಗವಂತರಿಗೆ ಸೂತಕಗಳಿಲ್ಲ. ನಿತ್ಯವೂ ಶಿವಪೂಜೆ ಎನ್ನುವುದು ವೀರಶೈವ ದರ್ಶನಕಾರರ ಅಭಿಪ್ರಾಯ. ಪ್ರತಿಯೊಂದು ಧರ್ಮದಲ್ಲಿಯೂ ಸೂತಕಗಳಿದ್ದು, ಅವರದ್ದೇ ಆದ ಅರ್ಥ, ಆಚರಣೆಗಳಿವೆ. ಮಾನವ ನಿರ್ಮಿತವಾಗಿರುವ ಸೂತಕಗಳು ಅವರವರ ಮಡಿವಂತಿಕೆಯ ಅನನ್ಯತೆಯನ್ನು ವಿಭಿನ್ನವಾಗಿ ಹೇಳುತ್ತವೆ. ಆದರೆ ಮಾನವಧರ್ಮ ಪ್ರತಿಪಾದಕರಾಗಿದ್ದ ಶರಣರಿಗೆ ಸೂತಕಗಳ ಸೂಕ್ಷ್ಮತೆಯು ಒಂದು ಸವಾಲಾಗಿತ್ತು. ಶರಣರಿಗೆ ಇದು ಅತ್ಯಂತ ಚರ್ಚಿತವಾದ ಮತ್ತು ವಾಗ್ವಾದಕ್ಕೆ ಕಾರಣವಾದ ವಿಷಯವಾಗಿತ್ತು. ಚೆನ್ನಬಸವಣ್ಣನ ಅನೇಕ ವಚನಗಳು ಇದನ್ನೇ ಕುರಿತವುಗಳಾಗಿವೆ.

ರಜಸ್ಸೂತಕ ಕುಲಸೂತಕ
ಜನನಸೂತಕ ಪ್ರೇತಸೂತಕ
ಉಚ್ಛಿಷ್ಠ ಸೂತಕ ಎಂದಡೆ ಆತಂಗೆ ಗುರುವಿಲ್ಲ, ಲಿಂಗವಿಲ್ಲ
ಜಂಗಮವಿಲ್ಲ, ತೀರ್ಥಪ್ರಸಾದವಿಲ್ಲ
ಇಂತೀ ಪಂಚಸೂತಕವ ಕಳೆದಲ್ಲದೆ ಭಕ್ತನಾಗ
.............ಕೂಡಲ ಚೆನ್ನಸಂಗಮದೇವ.

**ಸಾಂಪ್ರದಾಯಿಕವಾಗಿ ಹಿಂದೂಗಳು ಐದು ಸೂತಕಗಳನ್ನು ಆಚರಿಸುತ್ತಾರೆ.**

1. **ಜಾತಿಸೂತಕ:** ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೆಳಜಾತಿಯವ ಸಂಪರ್ಕ ಮೇಲು ಜಾತಿಯವರಿಗೆ ಸೂತಕ ರೂಪದಲ್ಲಿ ಕಾಡಿದ್ದುಂಟು. ಜಾತಿ ಸೂತಕಗಳ ಶಾಪದಲ್ಲಿ ನರಳುತ್ತಿರುವ ದೇಶದಲ್ಲಿ ಜಾತಿ ನಿರ್ಮೂಲನೆಗೆ ಮುಂದಾದವರು ಬಸವಣ್ಣ. ಜಾತಿ ಹುಟ್ಟಿನಿಂದ ಬರುವುದಿಲ್ಲ. ಹೊಲೆತನವನ್ನು ಕಳೆದುಕೊಂಡರೆ ಮಾತ್ರ ಆಗ ಆ ವ್ಯಕ್ತಿ ಕುಲಜನಾಗುತ್ತಾನೆ ಎಂದು ಕುಲ ಸೂತಕವನ್ನು ಶರಣರು ಧಿಕ್ಕರಿಸಿದರು.
2. **ಪ್ರೇತಸೂತಕ:** ಸತ್ತ ವ್ಯಕ್ತಿಯಿಂದ ಇದು ಸಂಭವಿಸುತ್ತದೆ. ಯಾವುದೇ ಮನೆಯಲ್ಲಿ ಯಾರಾದರೂ ಮರಣ ಹೊಂದಿದಾಗ ಆ ಮನೆಯವರಿಗೆಲ್ಲ ಮೈಲಿಗೆ. ಅಂತಹ ಸೂತಕವನ್ನು ಕಳೆದುಕೊಳ್ಳುವ ತನಕ ಶುಭಕಾರ್ಯ, ದೇವರು, ಧರ್ಮ ಸಂಬಂಧಿಯಾದ ಆಚರಣೆಗಳಿಗೆ ನಿಷಿದ್ಧವಿರುತ್ತದೆ. ಮರಣವನ್ನು ಮಹಾನವಮಿ ಎಂದು ಸಾರಿ ಹೇಳಿದ ಶರಣರು ಇದನ್ನು ಧಿಕ್ಕರಿಸಿದರು. ಸಂಸಾರಿ ಸತ್ತರೆ ಸೂತಕ. ಗುರು ಪೀಠಗಳ ಶ್ರೀಗಳು ಐಕ್ಯರಾದರೆ ಸೂತಕ ನಿಷಿದ್ಧವೇ? ಎಂದು ಪ್ರಶ್ನಿಸಿದರು.
3. **ಜನನ ಸೂತಕ:** ಮಗುವಿನ ಜನನವು ಶುಭಸೂಚಕ. ಮಂಗಳಕರ, ವಂಶಾಭಿವೃದ್ಧಿಯ ಕುರುಹು, ಮಕ್ಕಳ ಫಲ ಪೂರ್ವಜನ್ಮದ ಪುಣ್ಯದಿಂದ ಪ್ರಾಪ್ತಿಯಾಗುತ್ತದೆ ಎನ್ನುವ ನಂಬಿಕೆಯೂ ಉಂಟು. ಹಾಗಿರುವಾಗ ಇದನ್ನು ಸೂತಕ ಎಂದು ಬಿಂಬಿಸುವುದು ಎಷ್ಟು ಸರಿ ಎಂದು ಶರಣರು ಪ್ರಶ್ನಿಸಿದರು. ಮರಣವನ್ನಪ್ಪಿದ ವ್ಯಕ್ತಿಯ ಮನೆಯಲ್ಲಿ ಸಾವಿನ ಸೂತಕವಾದರೆ ಮಗು ಜನಿಸಿದ ಮನೆಯಲ್ಲಿ ಸಂತೋಷ ಸೂತಕವಾಗುತ್ತದೆ.
4. **ರಜಸೂತಕ:** ಹೆಣ್ಣುಮಕ್ಕಳು ಋತುಮತಿಯಾಗುವುದರಿಂದ ಇದು ಪ್ರಾಪ್ತಿಯಾಗುತ್ತದೆ. ಜೈವಿಕವಾಗಿ, ವೈಜ್ಞಾನಿಕವಾಗಿ ಇದು ಪ್ರಕೃತಿದತ್ತ ಕ್ರಿಯೆ. 'ಮುಟ್ಟಿಲ್ಲದೆ ಹುಟ್ಟಿಲ್ಲ' ಎನ್ನುವ ಮಾತುಂಟು. ಇದು ಹೆಣ್ಣಿನ ವಿಶೇಷವಾದ ಶಕ್ತಿ. ಸಂತಾನೋತ್ಪತ್ತಿಗೆ ಕಾರಣವಾಗುವ ಸಂಗತಿಯನ್ನು ಸೂತಕದ ನೆಪದಲ್ಲಿ ಹೆಣ್ಣುಮಕ್ಕಳನ್ನು ಅಂತಹ ಸಂದರ್ಭಗಳಲ್ಲಿ ದೂರವಿಡುವ ಪ್ರಯತ್ನವಾಗಿದೆ.
5. ***ಉಚ್ಛಿಷ್ಠ* ಸೂತಕ:** ಇದನ್ನು ಎಂಜಲು ಸೂತಕ ಎಂದೂ ಕರೆಯುವುದುಂಟು. ಈ ಸೂತಕ ಕೆಳವರ್ಗವನ್ನು ಕಾಡಿಲ್ಲ. ಕೆಳವರ್ಗ ಮತ್ತು ದುಡಿಯುವ ವರ್ಗ ತಮ್ಮ ದುಡಿಮೆಯ ಫಲವನ್ನು ಅನುಭವಿಸುವುದಕ್ಕಿಂತ ಮೊದಲು ಮಡಿ ಮೈಲಿಗೆಯಾಗದಂತೆ ಸ್ವಲ್ಪ ಭಾಗವನ್ನು ಮಠ ಮಂದಿರಗಳಿಗೆ, ಪುರೋಹಿತರಿಗೆ ಮೀಸಲಿರಿಸುತ್ತಿದ್ದುದ್ದುಂಟು. ಒಂದು ವೇಳೆ ಮೀಸಲು ತೆಗೆದಿರಿಸದೆ ಬಳಸಿದರೆ ಅದು ಎಂಜಲಾಗುತ್ತಿತ್ತು. ಕೆಳವರ್ಗದವರು ಬಳಸಿದ್ದನ್ನು ಸ್ವೀಕರಿಸುವುದು ಮೇಲುವರ್ಗಕ್ಕೆ ಸೂತಕವಾಗಿ ಕಾಡಿರುವುದುಂಟು.

ಪಂಚಸೂತಕಗಳು ದೇಹಕ್ಕೆ ಸಂಬಂಧಪಟ್ಟವು. "ಭಕ್ತನಾದವನಿಗೆ ಇವುಗಳ ಕಟ್ಟುಪಾಡುಗಳಿಲ್ಲ. ಇವನ್ನು ಬಿಟ್ಟಿಲ್ಲದೆ ಅವನು ಭಕ್ತನಾಗುವುದಿಲ್ಲ" ಎಂದು ಶರಣರು ಸೂತಕಗಳನ್ನು ನಿರಾಕರಿಸಿದರು. ಎಲ್ಲ ದೋಷಗಳನ್ನು ನಾಶ ಮಾಡುವ ಶಕ್ತಿ ಲಿಂಗದೀಕ್ಷೆಗಿದೆ ಎಂದು ಬಲವಾಗಿ ಪ್ರತಿಪಾದಿಸಿದರು.

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ.
ಕುಲವುಂಟೆ ಜಂಗಮವಿದ್ದೆಡೆಯಲ್ಲಿ
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ
ಅಪವಿತ್ರ ನುಡಿಯ ನುಡಿವ
ಸೂತಕವೆ ಪಾತಕ .........
........... ಕೂಡಲಸಂಗಮದೇವಾ

ಸಕಲ ಜೀವರಾಶಿಯ ಲೇಸನ್ನು ಬಯಸಿದ್ದ ಬಸವಾದಿ ಶರಣರು ಸನಾತನ ಶಾಸ್ತ್ರ, ಪುರಾಣ, ಆಚರಣೆಯ ಪರಿಕಲ್ಪನೆಗಳನ್ನು ಪ್ರಶ್ನಿಸಿದರು. ವೈದಿಕ ಪರಂಪರೆಯಿಂದ ಬಂದ ಬಹಳಷ್ಟು ಮೌಲ್ಯಗಳು ಇಲ್ಲಿ ಚರ್ಚೆಯ ವಿಷಯವಾದವು. ಕಾಯಕದಲ್ಲಿ ನಂಬಿಕೆಯಿರಿಸಿದ್ದ ಇವರು ಮೂಢ ನಂಬಿಕೆಗಳನ್ನು, ಜ್ಯೋತಿಷ್ಯ, ಪಂಚಾಂಗಗಳನ್ನು ಕಟುವಾಗಿ ಟೀಕಿಸಿದರು.

ಪಂಚಾಂಗ ಪಂಚಾಂಗವೆಂದು
ಕಳವಳಗೊಂಡು ಜೋಯಿಸನ ಕರೆಸಿ
ಕೈ ಮುಗಿದು ಕಾಣಿಕೆಯನಿಕ್ಕಿ
ಎಲೆ ಅಡಕೆಯಂ ಕೊಟ್ಟು
ಜೋಯಿಸರ ವಾಕ್ಯವು ಸಕಲ
ಕಾರ್ಯಕ್ಕೆ ಸಿದ್ಧಿಯೆಂದು
ಅವನ ಬಾಯ ತಂಬುಲವ ತಿಂಬ
ಹಂದಿಗಳಿರಾ ಎತ್ತ ಬಲ್ಲಿರಯ್ಯ
ಶಿವಾಚಾರದ ಪದ್ಧತಿಯನು
........ (ನಿರಾಲಂಬ ಪ್ರಭುದೇವ)

ಭವಿಷ್ಯವಾಣಿಯನ್ನು ನುಡಿಯುತ್ತಾ ಮುಗ್ಧ ಜನರನ್ನು ವಂಚಿಸಿ, ಹೊಟ್ಟೆ ಹೊರೆಯುವವರ ಬಗ್ಗೆ ಶರಣರು ಕಟುವಾದ ಮಾತುಗಳನ್ನಾಡುತ್ತಾರೆ. ಮೂಢನಂಬಿಕೆಗಳು ಮೂಢರಿಂದ ಆಚರಣೆಗೆ ಬಂದವು ಎನ್ನುವ ಮಾತಿದೆ. ಆದರೆ ವಿದ್ಯಾವಂತರೂ ಇದರಿಂದ ಹೊರತಾಗಿಲ್ಲ. ಜನರ ಅಜ್ಞಾನ, ಅಸಹಾಯಕ ಸ್ಥಿತಿ, ಅಂಧ ಶ್ರದ್ಧೆ, ಮೊದಲಾದವುಗಳು ಮೂಢ ನಂಬಿಕೆಗಳನ್ನು ಬಲಗೊಳಿಸುತ್ತಿವೆ. ಇಂದಿನ ವಿಜ್ಞಾನದ ಯುಗದಲ್ಲಿಯೂ ದೃಶ್ಯ ಮಾಧ್ಯಮದ ಹಾವಳಿಯಿಂದ ವಿದ್ಯಾವಂತರನ್ನೂ ದಿಕ್ಕು ತಪ್ಪಿಸುವ ಕೆಲಸವಾಗುತ್ತಿದೆ. ಒಳ್ಳೆಯ ದಿನ, ಕಾಲದ ಹುಡುಕಾಟ ನಡೆಯುತ್ತಿದೆ. ಆದರೆ ಶರಣರ ಪ್ರಕಾರ ಎಲ್ಲ ಕಾಲವು ಶುಭ ಕಾಲವೇ, ಎಲ್ಲಾ ದಿನವೂ ಶುಭ ದಿನವೇ ಆಗಿದೆ.

ಶರಣರು ಮೂಢ ನಂಬಿಕೆಗಳನ್ನು ಪ್ರೋತ್ಸಾಹಿಸಲಿಲ್ಲ. ಪ್ರಾಣಿ ಬಲಿಯನ್ನು ವಿರೋಧಿಸಿದರು. ದೇವರನ್ನು ಮೆಚ್ಚಿಸಲು ಪ್ರಾಣಿಬಲಿ ಬೇಕಾಗಿಲ್ಲ ಎಂದು ಹೇಳಿದ ಬಸವಣ್ಣ, ದೇವರನ್ನು ಒಲಿಸಿಕೊಳ್ಳಲು ಪರಿಶುದ್ಧವಾದ ನಂಬಿಕೆಯೊಂದೇ ಸಾಕು ಎಂದು ಹೇಳುತ್ತಾರೆ. ಧರ್ಮ, ದೇವರುಗಳ ಹೆಸರಿನಲ್ಲಿ ನಡೆಯುವ ಅನಾಚಾರಗಳನ್ನು ಖಂಡಿಸಿದರು. ಯಜ್ಞ, ಯಾಗ, ಮಂತ್ರ, ತಂತ್ರಗಳ ಹೆಸರಿನಲ್ಲಿ ಬೆಂಕಿಗೆ ತುಪ್ಪ ಸುರಿಯುವುದು, ಜರತಾರಿ ಸೀರೆಗಳನ್ನು ಸುಟ್ಟುಹಾಕುವುದು ಮೊದಲಾದವು ಖಂಡನೆಗೊಳಗಾದವು. 'ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ' ಎನ್ನುವ ಸತ್ಯವನ್ನು ಬಯಲು ಮಾಡಿದರು.

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ.
ತರ್ಕವೆಂಬುದು ತಗರ ಹೋರಟೆ
ಭಕ್ತಿ ಎಂಬುದು ತೋರಿ ಉಂಬ ಲಾಭ
.......... ಗುಹೇಶ್ವರನೆಂಬುದು ಮೀರಿದ ಘನವು.

ಎಂದು ಅಲ್ಲಮಪ್ರಭು ವೇದ ಶಾಸ್ತ್ರ, ಪುರಾಣ ಎಲ್ಲವನ್ನೂ ಜಾಲಾಡಿ ಸತ್ಯವನ್ನು ಕಾಣುವ ಪ್ರಯತ್ನ ಮಾಡಿದರು. ಶರಣರು ವೇದಗಳನ್ನಷ್ಟೇ ಅಲ್ಲ, ಬಹು ದೇವತಾ ಉಪಾಸನೆಯನ್ನೂ ಅಲ್ಲಗಳೆದರು. ದೈವ ಒಂದೇ ಎಂದು ಸಾರಿದ ಇವರು ಕ್ಷುದ್ರ ದೈವಾರಾದನೆಯನ್ನು ಖಂಡಿಸಿದರು. ನಿತ್ಯ ಬಳಕೆಯ ವಸ್ತುಗಳು ದೇವರಲ್ಲ ಎಂದು ಸಾರಿದರು.

ಮಡಿಕೆ ದೈವ, ಮೊರದೈವ
ಬೀದಿಯ ಕಲ್ಲುದೈವ, ಬಿಲ್ಲನಾರಿ ದೈವ ಕಾಣಿರೊ
ಕೊಳಗ ದೈವ, ಗಿಣ್ಣಿಲುದೈವ ಕಾಣಿರೊ
ದೈವ ದೈವವೆಂದು ಕಾಲಿಡಲಿಂಬಿಲ್ಲ

**ದೈವನೊಬ್ಬನೆ ಕೂಡಲ ಸಂಗಮದೇವಾ**

ಭಕ್ತಿ ಏಕಮುಖವಾಗಿರಬೇಕು. ಕ್ಷುದ್ರ ಬಯಕೆಗಳಿಗಾಗಿ ದೇವರುಗಳನ್ನು ಪೂಜಿಸುತ್ತಾ ಅದನ್ನು ವ್ಯಾಪಾರದ ಮಟ್ಟಕ್ಕಿಳಿಸಬಾರದು ಎಂದರು. ದೇಹದೊಳಗೆ ದೇವಾಲಯವಿದ್ದು ಮತ್ತೆ ದೇವಾಲಯವೇಕೆ? ಎನ್ನುತ್ತಾರೆ ಬಸವಣ್ಣ. ಆಧುನಿಕ ಕನ್ನಡ ಕವಿ ಕುವೆಂಪು 'ನಾರಾಯಣನು ಗುಡಿಯೊಳಿಲ್ಲ' ಎನ್ನುತ್ತಾರೆ. ಜಲಗಾರನ ರೂಪದಲ್ಲಿ ಶಿವನನ್ನು ಕಾಣುವ ಕುವೆಂಪು "ಶಿವ ಕಾಣಲು ನೀನು ಗುಡಿಗೆ ಹೋಗುವೆಯೇನು? ನಿನ್ನ ನೇಗಿಲ ಗೆರೆಯ ದಿವ್ಯ ದೇವಾಲಯದಡಿ ಶಿವನ ಕಾಣೆಯ ನೀನು?" ಎಂದು ಪ್ರಶ್ನಿಸಿದ್ದಾರೆ.

ಇಂದು ದೇವರ ಹೆಸರಿನಲ್ಲಿ ವ್ಯಾಪಾರ ನಡೆಯುತ್ತಿದೆ. ದೇವರಿಗೆ ಭವ್ಯವಾದ ಗುಡಿಯನ್ನು ನಿರ್ಮಿಸಿ, ದೇವರು ಮತ್ತು ಭಕ್ತರ ನಡುವೆ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ. ಯಾವ ವಾಣಿಜ್ಯ ವಹಿವಾಟಿಗೂ ಕಡಿಮೆ ಇಲ್ಲದಂತೆ ಕೆಲವು ಶ್ರೀಮಂತ ದೈವಗಳು ಕಂಗೊಳಿಸುತ್ತಿವೆ. ದೇವರ ದರ್ಶನಕ್ಕೆ ಹಣ ಸಂದಾಯ ಮಾಡಿ ಕಾಯಬೇಕಾಗಿದೆ. ಪ್ರಸಾದ ವ್ಯಾಪಾರಿ ಸರಕಾಗಿದೆ. ಇಂಥ ಸ್ಥಾವರಗಳನ್ನು ಖಂಡಿಸಿದವರು ಶರಣರು. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂದ ಬಸವಣ್ಣ ಆತ್ಮಲಿಂಗಕ್ಕೆ ಮಹತ್ವ ನೀಡಿದರು. ನೆಲಮೂಲ ಸಮುದಾಯದ ಕಾಯಕ ಜೀವಿಗಳಲ್ಲಿ ಆತ್ಮ ವಿಶ್ವಾಸವನ್ನು ತುಂಬಿದ ವಚನಗಳು ಜೀವನ ಸಿದ್ಧಾಂತವನ್ನು ಪ್ರತಿಪಾದಿಸಿವೆ. ಇಲ್ಲಿ ಕಾವ್ಯಧರ್ಮ ಮತ್ತು ಮಾನವ ಧರ್ಮಗಳ ತಿರುಳು ಸಮರಸಗೊಂಡು ಸುಂದರವಾದ ಭಾವಾಭಿವ್ಯಕ್ತಿಯನ್ನು ಪಡೆದಿವೆ. ಬದುಕಿನ ಸನ್ಮಾರ್ಗವನ್ನು ತೋರಿಸಿಕೊಟ್ಟಿರುವ ವಚನಗಳಿಗೆ ಜಾತಿ, ಜನಾಂಗದ ಕಟ್ಟುನಿಟ್ಟಿಲ್ಲ. ದೇಶ ಭಾಷೆಯ ಪರಿಮಿತ ಮೇರೆಯಿಲ್ಲ. ಕಾಲದ ಪರಿಗೂ ಇವು ಒಳಪಡುವುದಿಲ್ಲ. ಮನಸ್ಸಿನ ಸಂಕುಚಿತ ಭಾವನೆಗಳನ್ನು ದೂರ ಮಾಡಿ ಸತ್ಯ, ಸೌಂದರ್ಯದ ಸಾಕ್ಷಾತ್ಕಾರವನ್ನು ಮೂಡಿಸಿರುವ ಶರಣರ ವಚನಗಳು ಎಂದೆಂದಿಗೂ ಸಜೀವ ಸಾಹಿತ್ಯವೆನಿಸಿವೆ.

**ಗ್ರಂಥಋಣ**


1. ಕನ್ನಡದಲ್ಲಿ ವಚನ ಸಾಹಿತ್ಯ ಡಾ. ಎಂ.ಎಂ ಕಲಬುರ್ಗಿ
2. ವಚನ ವಿನ್ಯಾಸ ಡಾ. ಗಿರಡ್ಡಿ ಗೋವಿಂದರಾಜ
3. ಅನುಭವ ಮಂಟಪ ಡಾ. ದೇಜಗೌ
4. ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು-(ಸಂ) ಡಾ. ಎಂ.ಎಸ್ ಲಠ್ಠೆ
5. ವಚನ ಸಾಹಿತ್ಯ ಡಾ. ಪಿ.ವಿ. ನಾರಾಯಣ
6. ಚಂದ್ರಬಿಂಬ ಡಾ. ಎಚ್.ಎಂ ಮಹೇಶ್
7. ವಚನಕಾರರು- ವೈಚಾರಿಕತೆ ಡಾ. ಎಸ್. ವಿದ್ಯಾಶಂಕರ್
8. ಜಲಗಾರ ಕುವೆಂಪು